**‘ತಾಯಿಸಾಹೇಬ’, ‘ಸಾವಿತ್ರಿ’ ಹಾಗೂ ‘ಜ್ಞಾನೇಶ್ವರಿ’ ಕೃತಿಗಳ ಮೂಲಕ ರಂ.ಶಾ. ಲೋಕಾಪುರ ಅವರು ಕನ್ನಡದ ಸಹೃದಯರ ಹೆಸರಿನಲ್ಲಿ ಸದಾ ಜೀವಂತರು. ಲೋಕಾಪುರ ಅವರ ಬದುಕು–ಸಾಧನೆ, ಸಾಹಿತ್ಯ ಮತ್ತು ಜ್ಞಾನಕ್ಷೇತ್ರಗಳ ನಡುವಣ ಅಪೂರ್ವ ಅನುಸಂಧಾನದ ಉದಾಹರಣೆಯಂತೆಯೂ ಕಾಣಿಸುತ್ತದೆ. ಕನ್ನಡ–ಮರಾಠಿ ಸಾಂಸ್ಕೃತಿಕ ಕೊಂಡಿಯಂತೆಯೂ ಕೆಲಸ ಮಾಡಿದ ಈ ವಿಶಿಷ್ಟ ಬರಹಗಾರ ನ. 19ರಂದು ಪುಣೆಯಲ್ಲಿ ನಿಧನರಾದರು.**

■ ಆನಂದ ಝುಂಜರವಾಡ



# ರಂ.ಶಾ. ಲೋಕಾಪುರ ರಾಗ–ರಂಗುಗಳ ಚಿಂತಕ

ಕೆಲವು ಬರಹಗಾರರು ಬದುಕುವ ಕ್ರಮವು ಅವರ ಬರಹದ ಜೊತೆ ಎಷ್ಟು ಸಾಂಗತ್ಯವನ್ನು ಸಾಧಿಸಿರುತ್ತದೆ ಎಂದರೆ ಆ ಬರಹಗಾರನ ಜೊತೆ ತುಸು ಮಾತನಾಡಿ, ನಂತರ ಅವರ ಕೃತಿಯನ್ನು ಓದಿದರೆ ತೀರ ಉತ್‌ಸ್ಫೂರ್ತವಾದ ಕಾಣ್ಕೆಗಳು ದೊರೆತುಬಿಡುತ್ತವೆ. ಇತ್ತೀಚೆಗೆ ನಮ್ಮನ್ನಗಲಿದ ರಂಗಾಚಾರ್ಯ ಶಾಮಾಚಾರ್ಯ ಲೋಕಾಪುರ (ಜುಲೈ 13, 1932 – ನವೆಂಬರ್ 19, 2019) ಇದೇ ಬಗೆಯ ಬರಹಗಾರರು. ಮುಂಬೈ ಕರ್ನಾಟಕದ ಮಣ್ಣಿನ ಮೂಲಗುಣವೇ ಅದರ ಅ–ಶೈಕ್ಷಣಿಕ ಪ್ರತಿಭೆಯ ಪ್ರಗಲ್ಭತೆಯಾಗಿದೆ. ಅಂದರೆ ಶೈಕ್ಷಣಿಕ ಪ್ರಮಾಣ ಪತ್ರಗಳು ತರುವ ಸಾಂಸ್ಕೃತಿಕ ಚೌಕಟ್ಟುಗಳ ಮಿತಿಯನ್ನೂ ಮೀರಿ ಬರೆಯುವ–ಬದುಕುವ ಒಂದು ಸಹಜ ಪ್ರತಿಭೆ ಈ ಜೀವಿಗಳಲ್ಲಿ ಅರ್ಕವಾಗಿ ಬಿಟ್ಟಿರುತ್ತದೆ.

ರಂ.ಶಾ. ಎಂದೇ ಖ್ಯಾತರಾದ ಲೋಕಾಪೂರರು ಹುಟ್ಟಿದ್ದು ಇಂದಿನ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಹುನ್ನೂರು ಎಂಬ ಗ್ರಾಮದಲ್ಲಿ. ಜಮಖಂಡಿ, ಪಟವರ್ಧನರ ಸಂಸ್ಥಾನಿಕ ಆಡಳಿತವಿದ್ದ ಪ್ರದೇಶವಾಗಿದ್ದ ಕಾಲವದು. ರಂ.ಶಾ. ಅವರೂ ಬಾಲ್ಯದಲ್ಲಿ ಆ ಸಂಸ್ಥಾನಿಕರ ಸಾಮ್ರಾಜ್ಯವಾದದ ಸೂಕ್ಷ್ಮಗಳನ್ನೂ ಸುಪ್ತಪ್ರಜ್ಞೆಯ ನೆಲೆಯಲ್ಲಿ ಅನುಭವಿಸಿರಬೇಕು. ನಂತರ ಮುಂಬೈಯಲ್ಲಿ ಅಕೌಂಟೆಂಟ್‌ರಾಗಿ ಕರ್ತವ್ಯನಿರತರಾದಾಗ, ಆ ಬೃಹತ್ ನಗರಿಯ ಬಾಳಿನ ಭೇರಿ–ನಗಾರಿಗಳ ನಾಗರಿಕ ಡಿಂಡಿಮವೂ ಅವರ ಕಿವಿಯಲ್ಲಿ ತುಂಬಿಕೊಂಡಿರಬೇಕು. ಅಂದರೆ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಒಳ–ಹೊರಗಿನ ತುದಿಗಳ ಹಲವು ಪ್ರಾತಿನಿಧಿಕ ಮಾದರಿಗಳು ಅವರ ಅನುಭವದಲ್ಲೇ ದೃಶ್ಯ–ದರ್ಶನಗಳಾಗಿ ನೆಲೆಯೂರಿದ್ದವು. ಜೊತೆಗೆ ರಂ.ಶಾ. ಅವರ ಇನ್ನೊಂದು ಬೃಹತ್ ಸೆಳೆತವೆಂದರೆ ಓದುವಿಕೆ. ಈ ಓದುವಿಕೆ ಬರೀ ಒಂದು ತಿಳಿವಿನ ದಾಹವಲ್ಲ. ಮಾಹಿತಿಗಳ ಉಗ್ರಾಣವನ್ನು ತುಂಬಿಕೊಂಡು ಅದನ್ನು ನಗದೀಕರಿಸಿಕೊಳ್ಳುವ ಯೋಜನೆಯುಳ್ಳದ್ದೂ ಅಲ್ಲ ರಂ.ಶಾ. ಅವರ ಓದು. ಒಂದು ಬಗೆಯಲ್ಲಿ ಅವರದೇ ಬದುಕಿನ ಅವರದೇ ಓದಿನ ಉಪಾಂಗವೇ ಆಗಿತ್ತು. ಹೀಗಾಗಿ ಅಂತರಂಗದ ತುರ್ತುಗಳ ಒತ್ತಡ, ಬಹಿರಂಗದ ಸಂಕೀರ್ಣ ವ್ಯವಸ್ಥೆಯ ವಿದ್ರಾವಕತೆಯ ವ್ಯಾಪಕತೆ ಇವುಗಳಿಂದ ಅವರ ಓದಿಗೆ ತತ್ವ ಹಾಗೂ ತಂತ್ರಗಳ ನೆಲೆಯ ಸೀಮಿತ ಆಯ್ಕೆಗಳು ಇರಲಿಲ್ಲ. ಜೊತೆಗೆ ಅವರಿಗೆ ಮರಾಠಿ ಭಾಷೆಯ ಮೇಲೂ ಸಹಜವಾದ ಪ್ರಭುತ್ವವೂ ಸೂಕ್ಷ್ಮ ನೆಲೆಯಲ್ಲಿ ಸಾಕಾರಗೊಂಡಿದ್ದರಿಂದ, ದ್ವಿ–ಭಾಷಾ ಒಡನಾಟದ